ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ.ನಂ.**584/2017.**

ದಿನಾಂಕಃ**20-07-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಗುರುರಾಜ್ | ಚಾಸಾ -14<br>ಪ್ರಾಸಾ -7 |
| ತಂದೆಯ ಹೆಸರು | ತೋಪಯ್ಯ ನಾಯ್ಕ | |
| ವಯಸ್ಸು (ವರ್ಷಗಳಲ್ಲಿ) | 48 | |
| ಉದ್ಯೋಗ | ಪಿ ಐ | |
| ವಾಸ | ಶಿವಮೊಗ್ಗ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ15.03.2015 ರಿಂದ 30.07.2017 ರವರೆಗೆ ದೊಡ್ಡಪೇಟೆ ವೃತ್ತ ಶಿವಮೊಗ್ಗದಲ್ಲಿ ಸಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದೊಡ್ಡಪೇಟೆ ವೃತ್ತದ ಮೊಕದ್ದಮೆ ಸಂ.442/2015 ರ ತನಿಖೆಯನ್ನು ಕೈಗೊಂಡಿರುತ್ತೇನೆ, ಕೋಟೆ ಪೊಲೀಸ್ ಠಾಣೆಯ ಮೊಕದ್ದಮೆ ಸಂ.235/2015 ರಲ್ಲಿ ಈ ಪ್ರಕರಣದ 1 ಮತ್ತು 3 ನೇ ಆರೋಪಿಯನ್ನು ಬಂಧಿಸಿದ್ದು ಅವರು ನ್ಯಾಯಾಂಗಬಂಧನದಲ್ಲಿ ಇರುತ್ತಾರೆ.

ನಾನು ದಿಃ02.02.2016 ರಂದು 1 ಮತ್ತು 3 ನೇ ಆರೊಪಿಯನ್ನು ಪೊಲೀಸ್ ಕಸ್ಟಡಿಗೆ ಪಡೆದಿರುತ್ತೇನೆ. ನಂತರ ನಾನು ಸದರಿ ಆರೋಪಿತರನ್ನು ವಿಚಾರಣೆ ಮಾಡಿ ಅವರಿಂದ ಸ್ವ-ಇಚ್ಛಾ ಹೇಳಿಕೆ ಪಡೆದಿರುತ್ತೇನೆ.

3 ನೇ ಆರೋಪಿ ತನ್ನ ಸ್ವ- ಇಚ್ಛಾ ಹೇಳಿಕೆಯಲ್ಲಿ 4 ನೇ ಆರೋಪಿ ತೋರಿಸಿ ಅವರಿಗೆ ಮಾರಾಟ ಮಾಡಿದ್ದ ಹಾಗೂ 1 ನೇ ತನ್ನ ಸಹಚರರೊಂದಿಗೆ ಸೇರಿ ಕಳುವು ಮತ್ತು ಸುಲಿಗೆ ಮಾಡಿ ನನಗೆ ತಂದು ಕೊಟ್ಟ ಬಂಗಾರ ಮತ್ತು ಬೆಳ್ಳಿಯ ಒಡವೆಗಳನ್ನು ಕೊಡಿಸಿಕೊಡುತ್ತೇನೆ ಎಂದು ತಿಳಿಸಿರುತ್ತಾರೆ.

ನಂತರ ದಿಃ05.02.2016 ರಂದು ಪಂಚರಾದ ಚಾಸಾ 6, 7 ರವರನ್ನು ಸಂಜೆ 5.15 ಕ್ಕೆ ಠಾಣೆಗೆ ಬರಮಾಡಿಕೊಂಡು ಪ್ರಕರಣ ವಿಚಾರ ತಿಳಿಸಿ 1, 3 ನೇ ಆರೋಪಿಯು ಸ್ವ-ಇಚ್ಛಾ ಹೇಳಿಕೆಯ ಮಾಹಿತಿ ತಿಳಿಸಿ ಹಾಗೂ 3 ನೇ ಆರೋಪಿಯು ಹೇಳಿದಂತೆ ಅದನ್ನು ಹಾಜರುಪಡಿಸುವ ಸಮಯದಲ್ಲಿ ಪಂಚರಾಗುವಂತೆ ನೋಟೀಸು ಜಾರಿ ಮಾಡಿರುತ್ತೇನೆ.

ನಂತರ ನಾನು ಸಂಜೆ 5.40 ಕ್ಕೆ ತನಿಖೆಗೆ ಬೇಕಾದ ಸಾಮಗ್ರಿಗಳೊಂದಿಗೆ 3 ನೇ ಆರೋಪಿಯು ತೋರಿಸಿದ ಮಾರ್ಗದಲ್ಲಿ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ತೆರಳಿದ್ದು ಆರೋಪಿ ತೋರಿಸಿದ ಗಾಂಧಿ ಬಜಾರ್ ರಸ್ತೆಗೆ ಹೋಗಿ ಅಲ್ಲಿ ಜಾಮೀಯ ಮಸೀದಿ ಬಳಿಯ ಒಂದು ಬಂಗಾರದ ಅಂಗಡಿಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಂಗಡಿಯು ಲಕ್ಷ್ಮೀ ಜ್ಯೂವೆಲ್ಲರಿ ಅಂಗಡಿಯಾಗಿದ್ದು, ಅಲ್ಲಿನ ವ್ಯಕ್ತಿ ತೋರಿಸಿ ಆತನಿಗೆ ತಾನು ಬಂಗಾರದ ಮತ್ತು ಬೆಳ್ಳಿಯ ಗಟ್ಟಿ ಮತ್ತು ಒಡವೆಗಳನ್ನು ಮಾರಾಟ ಮಾಡಿದ್ದಾಗಿ ತಿಳಿಸಿರುತ್ತಾರೆ. ಸದರಿಯು 4 ನೇ ಆರೋಪಿಯಾಗಿದ್ದು ವಿಚಾರಣೆ ಮಾಡಲಾಗಿ ತನ್ನ ಹೆಸರು ವಿಳಾಸ ತಿಳಿಸಿರುತ್ತಾನೆ.

ನಂತರ, 3 ನೇ ಆರೋಪಿಯಿಂದ ಪಡೆದಿದ್ದ ಒಡವೆಗಳನ್ನು ಹಾಜರುಪಡಿಸಲು ತಿಳಿಸಿದಾಗ 4 ನೇ ಆರೋಪಿಯು ಒಟ್ಟು 1kg 208 gram ನ ಬಂಗಾರದ ಒಡವೆ ಮತ್ತು ಗಟ್ಟಿ ಹಾಗೂ 1 ಕೆ ಜಿ ಬಿಳ್ಳಿಯ ಒಡವೆ ಹಾಜರುಪಡಿಸಿರುತ್ತಾರೆ. ಪಂಚರ ಪೈಕಿ ಚಾಸಾ 6 ರವರು ಅಕ್ಕಸಾಲಿಗರಾಗಿದ್ದು ಅವರಿಂದ ಒಡವೆಗಳನ್ನು ಪರಿಶೀಲನೆ ಮಾಡಿ ತೂಕ ಮಾಡಿಸಿರುತ್ತೇನೆ. ಈ ಬಗ್ಗೆ ಅಮಾನತ್ತು ಪಂಚನಾಮೆಯನ್ನು ಸಂಜೆ 6 ರಿಂದ 8 ಗಂಟೆಯವರೆಗೂ ಜರುಗಿಸಿರುತ್ತೇನೆ. ಸದರಿ ವೇಳೆ ನಿಪಿ 7 ರಂತೆ ಪೋಟೋ ತೆಗೆಯಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಿಪಿ 6 ರಲ್ಲಿ ಪುಟ ಸಂ.4 ಮತ್ತು ಕ್ರಮ ಸಂ.68 ರಲ್ಲಿ ಇರುತ್ತದೆ. ನಂತರ ನಾನು ಮಾಲುಗಳೊಂದಿಗೆ ಠಾಣೆಗೆ ಹಿಂದಿರುಗಿ ಸ್ವತ್ತುಪಟ್ಟಿ ತಯಾರಿಸಿರುತ್ತೇನೆ.

ನಂತರ ದಿ:06.02.2016 ರಂದು ಅಮಾನತ್ತು ಪಡಿಸಿಕೊಂಡ ಒಡವೆಗಳನ್ನು 1 ನೇ ಆರೋಪಿಯಿಂದ ಗುರುತುಪತ್ತೆ ಮಾಡಬೇಕಾಗಿದ್ದರಿಂದ ಚಾಸಾ 6, 8 ರವರನ್ನು ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ ನೋಟೀಸು ಜಾರಿ ಮಾಡಿ ಸದರಿಯವರ ಸಮಕ್ಷಮ 1 ನೇ ಆರೋಪಿಯು ತಾನು ಕಳ್ಳತನ - ಸುಲಿಗೆ ಮಾಡಿದ್ದ ಒಡವೆಗಳನ್ನು ಮತ್ತು ಗಟ್ಟಿಗಳನ್ನು ಯಾವ ಜಾಗದಿಂದ ಯಾವ ಅವಧಿಯಲ್ಲಿ ಕಳ್ಳತನ - ಸುಲಿಗೆ ಮಾಡಿರುತ್ತೇನೆ ಎಂದು ನೋಡಿ ಗುರುತಿಸಿದ್ದು, ಈಗ ಬಗ್ಗೆ ಒಡವೆ ಗುರುತಿಸುವ ಪಂಚನಾಮೆಯನ್ನು ಬೆಳಗ್ಗೆ 8 ರಿಂದ 10 ಗಂಟೆಯವರೆಗೂ ಜರುಗಿಸಿರುತ್ತೇನೆ ಸದರಿ ಮಹಜರ್ ಅನ್ನು ನಿಪಿ 8 ಎಂದು ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು

ಗುರುತಿಸಲಾಯಿತು ಹಾಗೂ ಆ ವೇಳೆ ಪೋಟೋ ತೆಗೆಸಿರುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸದರಿ ಮಹಜರಿನ ಪುಟ ಸಂ.4 ಮತ್ತು ಕ್ರಮ ಸಂ.69 ರಲ್ಲಿ ಇರುತ್ತದೆ.

ನಂತರ, ಅದೇದಿನ ಚಾಸಾ 1 ರವರನ್ನು ಠಾಣೆಗೆ ಬರಮಾಡಿಕೊಂಡು ಸದರಿಯವರು ತಮ್ಮ ಒಡವೆಗಳನ್ನು ಗುರುತಿಸಿದ್ದು ಅವರಿಂದ ಹೇಳಿಕೆ ಪಡೆದಿರುತ್ತೇನೆ.

ನಂತರ ಸಾಕ್ಷಿದಾರರಾದ ಚಾಸಾ 6 ರಿಂದ 8 ರವರ ಹೇಳಿಕೆ ಪಡೆದಿರುತ್ತೇನೆ. ನಂತರ, ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ಚಾಸಾ 11 ರವರ ಮೂಲಕ ದಾಖಲಾತಿ ಮತ್ತು ಮಾಲಿನೊಂದಿಗೆ ಕಡೂರು ಠಾಣೆಗೆ ವರ್ಗಾಯಿಸಿರುತ್ತೇನೆ.

ನಿಪಿ 6, 8 ರಲ್ಲಿನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ 6 ಎ ಮತ್ತು 8 ಎ ಎಂದು ಗುರುತಿಸಲಾಯಿತು. ನಿಪಿ 7 ರಲ್ಲಿ ನಿಪಿ 6 ರ ಮತ್ತು ನಿಪಿ 8 ರ ಎರಡೂ ಪೋಟೋಗಳು ಇರುತ್ತವೆ.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರು ಇದ್ದು ವಿನಾಯಿತಿ ನೀಡಿರುವುದರಿಂದ ಆರೋಪಿಗಳ ಗುರುತಿಸುವಿಕೆಗೆ ವಿನಾಯಿತಿ ನೀಡಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಪಿ ವಿ ಎನ್ ವಕೀಲರಿಂದಃ

ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಯಾವುದೇ ಸೂಕ್ತ ಕಾರಣ ನೀಡದ ಕಾರಣ ಹಾಗೂ ಸಾಕ್ಷಿಯು ಸರ್ಕಾರಿ ನೌಕರರಾದ ಕಾರಣ ಅವರ ಕರ್ತವ್ಯಕ್ಕೆ ತೊಂದರೆಯಾಗುತ್ತದೆ ಎಂದು ಪರಿಗಣಿಸಿ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.